# ಭಕ್ತಕವಿ ಪೂಂತಾನಂ ನಂಬೂದಿರಿ


❖ ಪ್ರವ್ರಾಜಿಕಾ ಶಾಶ್ವತಪ್ರಾಣಾ

"ಮಾನವ ಜೀವನದ ಉದ್ದೇಶವು ಭಗವಂತನಲ್ಲಿ ಪ್ರೇಮ ಗಳಿಸುವುದೇ, ಆತನನ್ನು ಪ್ರೀತಿಸುವುದೇ. ಭಕ್ತಿಯೇ ಮುಖ್ಯ. ಜ್ಞಾನ, ವಿಚಾರ ಇವುಗಳಿಂದ ಆತನನ್ನು ಅರಿಯುವುದು ಎಂದರೆ ಬಹಳ ಕಠಿಣ" ಎಂಬ ಶ್ರೀರಾಮಕೃಷ್ಣ ಪರಮಹಂಸರ ದಿವ್ಯವಾಣಿಗೆ ಭಕ್ತಕವಿ ಪೂಂತಾನಂ ನಂಬೂದಿರಿಯ ಪಾವನ ಜೀವನವು ಉತ್ತಮ ನಿದರ್ಶನದಂತಿದೆ. (ನಂಬೂದಿರಿ ಎಂದರೆ ಕುಲೀನ ಬ್ರಾಹ್ಮಣ ಎಂದು ಅರ್ಥ).

ಕ್ರಿ.ಶ. ೧೬ನೇ ಶತಮಾನದಲ್ಲಿ ಪರಮ ಭಾಗವತರೂ, ಭಕ್ತಾಗ್ರೇಸರರೂ ಆದ ಪೂಂತಾನಂ ಅವರು ಗುರುವಾಯೂರಿನಿಂದ ೫೫ ಕಿ.ಮೀ. ದೂರದಲ್ಲಿರುವ ಅಂಗಾಡಿಪುರತ್ತ ತಿರುಮಾಂಧಾನಕುನ್ನ ಎಂಬ ಸ್ಥಳದಲ್ಲಿ 'ಪೂಂತಾನಂ' ಎಂಬ 'ಇಲ್ಲಂ'ನಲ್ಲಿ (ಬ್ರಾಹ್ಮಣರ ಮನೆಗೆ ಇಲ್ಲಂ ಎನ್ನುವರು) ಜನ್ಮ ತಾಳಿದರು. ಇವರ ನಿಜವಾದ ಹೆಸರು ಅಜ್ಞಾತವಾಗಿರುವುದರಿಂದ ಇವರನ್ನು ಇವರ ವಂಶದ ಹೆಸರಿನಿಂದಲೇ ಗುರುತಿಸುತ್ತಾರೆ. ಬ್ರಹ್ಮದತ್ತನೆಂಬ ಹೆಸರಿತ್ತು ಎಂದು ಕೆಲವರ ಅಭಿಪ್ರಾಯ. ಶ್ರೀಮದ್‌ಭಾಗವತವು ಅಡಕಗೊಂಡಿರುವ ನೂರು ಶ್ಲೋಕಗಳ 'ನಾರಾಯಣೀಯಂ' ಎಂಬ ಮಹಾಕಾವ್ಯದ ಕರ್ತೃವಾದ ಮೇಲ್ಪತ್ತೂರು ನಾರಾಯಣ ಭಟ್ಟತಿರಿಪ್ಪಾಡರ ಸಮಕಾಲೀನರಾಗಿದ್ದರು ಇವರು. ಪೂಂತಾನಂ ಅವರ ಕೃತಿಗಳಿಂದ ಇವರ ಗುರುಗಳು ಶ್ರೀಕಂಠನ್ ನಂಬೂದಿರಿ ಎಂಬುದು ತಿಳಿಯುತ್ತದೆ. ಪೂಂತಾನಂ ಅವರಿಗೆ ಸಂಸ್ಕೃತ ಪಾಂಡಿತ್ಯವಿರಲಿಲ್ಲ. ಇವರು ಭಕ್ತರಲ್ಲಿ ಅದ್ವಿತೀಯರಾಗಿದ್ದರು. ಸಂತ ತುಕಾರಾಂ, ತುಳಸೀದಾಸ, ಬಿಲ್ವಮಂಗಲ ಮುಂತಾದ ಭಕ್ತಶ್ರೇಷ್ಠರ ಸಾಲಿನಲ್ಲಿ ಇವರೂ ಸೇರುತ್ತಾರೆ. ಇವರು ಸುಧಾಮನ ಅವತಾರವೆಂದೂ ಕೆಲವರು ನಂಬುತ್ತಾರೆ.

ನಂಬೂದಿರಿ ಅವರು ತಮ್ಮ ಇಪ್ಪತ್ತನೇ ವಯಸ್ಸಿನಲ್ಲಿ ಗೃಹಸ್ಥಾಶ್ರಮಿಗಳಾದರು. ಅನೇಕ ವರ್ಷಗಳಾದರೂ ಮಕ್ಕಳಾಗದ್ದರಿಂದ ಸಂತಾನಕ್ಕಾಗಿ ಹಲವಾರು ಸತ್ಕರ್ಮಗಳನ್ನು ನೆರವೇರಿಸಿದರು. ಅವರು ಶ್ರೀಮದ್‌ಭಾಗವತವನ್ನು ಬಹಳ ನಿಷ್ಠೆಯಿಂದ ಪಾರಾಯಣ ಮಾಡುತ್ತಿದ್ದರು. ವಿಶೇಷವಾಗಿ ಅದರಲ್ಲಿ ಬರುವ 'ಸಂತಾನಗೋಪಾಲ' ಎಂಬ ಕಥಾಭಾಗವನ್ನು ಪಠಿಸಿ, ಗುರುವಾಯೂರು ವಾಸಿಯಾದ ಶ್ರೀಕೃಷ್ಣನನ್ನು ಭಜಿಸುತ್ತಿದ್ದರು (ಗುರುವಾಯೂರು ಎಂಬ ಸ್ಥಳದಲ್ಲಿ ಶ್ರೀಮಹಾವಿಷ್ಣು ನೆಲೆಸಿರುವನು. ಅವನನ್ನು ಕೇರಳದಲ್ಲಿ ಗುರುವಾಯೂರಪ್ಪನ್ ಎಂಬ ನಾಮದಿಂದ ಕರೆಯುವರು). ಇದರ ಫಲವಾಗಿ ಅವರಿಗೆ ಪುತ್ರಲಾಭವಾಯಿತು. ಈಶ್ವರನ ಭಜನೆಯಿಂದ ಲಭಿಸಿದ ಈ ಶಿಶುವು ಅನ್ನಪ್ರಾಶನದ ದಿನ ದುರ್ದೈವವೆನ್ನುವಂತೆ ಅಪಮೃತ್ಯುವಿಗೆ ಈಡಾಯಿತು. ಈ ದುರಂತವು ಅವರನ್ನು ದುಃಖವಿಹ್ವಲರನ್ನಾಗಿ ಮಾಡಿತು. ಆಪತ್ತುಗಳು ಹಾಗೂ ದುಃಖಗಳು ಈಶ್ವರನ ಇಚ್ಛೆಯಿಂದಲೇ ಬರುವುವು. ಮನುಷ್ಯನಾದವನು ಇದರಿಂದ ಪಾರಾಗಬೇಕಿದ್ದರೆ ಭಗವಂತನಲ್ಲಿ ಆರ್ತನಾಗಿ ಪ್ರಾರ್ಥಿಸುವುದೊಂದೇ ಮಾರ್ಗ ಎಂದು ಅರಿತಿದ್ದ ಭಕ್ತಾಗ್ರಣಿಗಳಾದ ಪೂಂತಾನಂ ಶ್ರೀಕೃಷ್ಣ ಪರಮಾತ್ಮನಲ್ಲಿ ಸಂಪೂರ್ಣ ಶರಣಾಗಿ, ತಮ್ಮ ಮನೋವೇದನೆಯನ್ನು ಅಡಗಿಸಿಕೊಂಡು, ವೈರಾಗ್ಯ ಭಾವವನ್ನು ತಾಳಿದರು. ಬಾಲಗೋಪಾಲನೇ ಹೃದಯದಲ್ಲಿ ನಲಿದಾಡುತ್ತಿರುವಾಗ ಈ ನಶ್ವರ ಕಂದನಿಗಾಗಿ ಶೋಕಿಸುವುದೇ ಎಂಬ ಮನೋಭಾವ ಅವರನ್ನಾವರಿಸಿತು. ಸಾವನ್ನಪ್ಪಿದ ಪುತ್ರನನ್ನು ಮಡಿಲಿನಲ್ಲಿ ಮಲಗಿಸಿಕೊಂಡು, 'ಜ್ಞಾನಪಾನಂ' ಎಂಬ ಪ್ರಸಿದ್ಧವಾದ ಕೃತಿಯನ್ನು ಹಾಡಿದರು. ಇದು ಮಲಯಾಳದ 'ಭಗವದ್ಗೀತೆ' ಹಾಗೂ 'ನಾಮೋಪನಿಷತ್' ಎಂದು ಕರೆಯಲ್ಪಟ್ಟಿದೆ. ಜ್ಞಾನಪಾನದಲ್ಲಿ ಐಹಿಕಸುಖಗಳ ಅರ್ಥಶೂನ್ಯತೆಯನ್ನು ಹಾಗೂ ಹರಿನಾಮಸ್ಮರಣೆಯ ತೀವ್ರ ಆವಶ್ಯಕತೆಯನ್ನೂ ಹೃದಯಸ್ಪರ್ಶಿಯಾಗಿ ವರ್ಣಿಸಲಾಗಿದೆ. ಭಾಷೆಯು ಸುಲಭವಾಗಿದ್ದರೂ ಗಹನವಾದ ತತ್ತ್ವಗಳಿಂದ ಒಳಗೊಂಡಿರುವುದು ಈ ಕವಿತೆಯ ವೈಶಿಷ್ಟ್ಯ. ಪೂಂತಾನಂ ಅವರನ್ನಾಗಲೀ ಅಥವಾ ಜ್ಞಾನಪಾನವನ್ನಾಗಲೀ ತಿಳಿಯದವರು ಕೇರಳದಲ್ಲಿ ಇಲ್ಲವೆಂದೇ ಹೇಳಬಹುದು.

ಈ ಕಹಿ ಅನುಭವದ ಅನಂತರ ಸಂಸಾರದಲ್ಲಿ ವಿರಕ್ತರಾಗಿ, ಹೆಚ್ಚುಹೆಚ್ಚಾಗಿ ಭಗವನ್ಮುಖರಾಗತೊಡಗಿದರು. ಕೇರಳದಲ್ಲಿ ಪುರಾತನವೂ ಪ್ರಸಿದ್ಧವೂ ಆಗಿರುವ ಗುರುವಾಯೂರು ಕ್ಷೇತ್ರಕ್ಕೆ ನಿಯಮಿತವಾಗಿ ಹೋಗತೊಡಗಿದರು. ಒಮ್ಮೆ ಪೂಂತಾನಂ ಅವರು ಗುರುವಾಯೂರಿಗ ನಡೆದು ಹೋಗುತ್ತಿರುವಾಗ ರಾತ್ರಿಯಾಯಿತು. ಬಹಳವಾಗಿ ದಣಿದಿದ್ದರು.



ಕೇರಳದ ತ್ರಿಶೂರಿನ ಶಾರದಾ ಮಠದಲ್ಲಿ ಸಂನ್ಯಾಸ ಜೀವನವನ್ನು ನಡೆಸುತ್ತಿರುವ ಲೇಖಕಿ ಕೇರಳದ ಭಕ್ತರಲ್ಲಿ ಅಗ್ರಗಣ್ಯರಾದ ಪೂಂತಾನಂ ಅವರ ಸಂಕ್ಷಿಪ್ತ ಜೀವನ ಪರಿಚಯ ನೀಡಿದ್ದಾರೆ.

ಕಾಡುಗಳ್ಳರ ಗುಂಪೊಂದು ಬಂದು ಇವರ ಮೇಲೆ ಆಕ್ರಮಿಸಿತು. ಕೈಯಲ್ಲಿ ಒಂದು ತಾಳೆಪತ್ರದ ಛತ್ರಿ ಹಾಗೂ ಭಾಗವತ ಗ್ರಂಥ ಮಾತ್ರ ಇವರ ಬಳಿ ಇದ್ದವು. ಅವರು ಆಪದ್ಬಾಂಧವನಾದ ಗುರುವಾಯೂರಪ್ಪನನ್ನು ಆರ್ತರಾಗಿ ಪ್ರಾರ್ಥಿಸತೊಡಗಿದರು. ಅಷ್ಟರಲ್ಲೇ ದೂರದಿಂದ ಕುದುರೆಯ ಮೇಲೆ ಸಾಮೂದಿರಿಯ ರಾಜನ ಮಂತ್ರಿಗಳಾದ ಮಂಗಾಟ್ಟಚ್ಚನ್ ವೇಗವಾಗಿ ಬರುತ್ತಿರುವುದನ್ನು ಕಂಡರು. ಮಂತ್ರಿಗಳು ಕಳ್ಳರನ್ನು ಸದೆಬಡಿದು ಪೂಂತಾನಂ ಅವರನ್ನು ರಕ್ಷಿಸಿದರು. ಕೃತಜ್ಞತೆಯಿಂದ ಕೊಡಲು ತಮ್ಮ ಕೈಯಲ್ಲಿ ಏನೂ ಇಲ್ಲವಲ್ಲ ಎಂದು ದುಃಖಿಸಿದಾಗ, ಕೈಯಲ್ಲಿ ಉಂಗುರವಿರುವುದನ್ನು ಮಂತ್ರಿಗಳು ಜ್ಞಾಪಿಸಿದರು. ಪೂಂತಾನಂ ಸಂತೋಷದಿಂದ ಅದನ್ನೇ ಅರ್ಪಿಸಿದರು. ಮಾರನೆಯ ದಿನ ಗುರುವಾಯೂರನ್ನು ತಲುಪಿ ದೇವರ ದರ್ಶನಕ್ಕಾಗಿ ಕ್ಷೇತ್ರಕ್ಕೆ ಹೋದಾಗ, ಅಲ್ಲಿನ ಅರ್ಚಕರು ದೇವರ ವಿಗ್ರಹದಿಂದ ಒಂದು ಉಂಗುರವನ್ನು ತೆಗೆದು ಪೂಂತಾನಂ ಅವರಿಗೆ ಒಪ್ಪಿಸಿದರು. ಆಶ್ಚರ್ಯವೆಂದರೆ ಮಂತ್ರಿಗಳಿಗೆ ಬಹುಮಾನವಾಗಿ ಕೊಟ್ಟಿದ್ದದ್ದು ಅದೇ ಉಂಗುರ! ವಿಚಾರಿಸಲಾಗಿ ಅರ್ಚಕರು ಪ್ರಾತಃಕಾಲ ಕ್ಷೇತ್ರಕ್ಕೆ ಬಂದಾಗ ಗುರುವಾಯೂರಪ್ಪನ ಹಸ್ತದಲ್ಲಿ ಈ ಉಂಗುರ ಇದ್ದಿತೆಂದೂ ನಂಬೂದಿರಿ ಬಾಲಕನೊಬ್ಬ "ಇದನ್ನು ಪೂಂತಾನಂಗೆ ಕೊಡಿ" ಎಂದು ಹೇಳಿ ಹೋದನೆಂದೂ ತಿಳಿಸಿದರು. ಇದನ್ನು ಕೇಳಿ ಆ ಭಕ್ತಶಿರೋಮಣಿಗೆ ಸ್ವಯಂ ಭಗವಂತನೇ ತನ್ನನ್ನು ರಕ್ಷಿಸಲು ಬಂದನೆಂಬುದು ವೇದ್ಯವಾಗಿ ಆನಂದದಿಂದ ಕೃತಾರ್ಥನಾದೆ ಎಂದುಕೊಂಡರು.

ಮತ್ತೊಂದು ಸಂದರ್ಭದಲ್ಲಿ ಪೂಂತಾನಂ ಅವರಿಗೆ ಅತ್ಯಂತ ಭಾವಪೂರ್ಣವಾದ 'ನಾರಾಯಣೀಯಂ' ಎಂಬ ಕೃತಿಯ ಕರ್ತರೂ, ಪಂಡಿತಾಗ್ರೇಸರೂ ಆದ ಮೇಲ್ಪತ್ತೂರು ಶ್ರೀನಾರಾಯಣ ಭಟ್ಟತಿರಿ ಅವರನ್ನು ಸಂಧಿಸುವ ಸುಯೋಗ ಉಂಟಾಯಿತು! ನಂಬೂತಿರಿ ಅವರು ತಮ್ಮ 'ಜ್ಞಾನಪಾನ' ಕೃತಿಯಲ್ಲಿ ತಪ್ಪುಗಳಿದ್ದಲ್ಲಿ ತಿದ್ದಬೇಕೆಂದು ಭಟ್ಟತಿರಿ ಅವರನ್ನು ವಿನಂತಿಸಲು ಆ ಪಂಡಿತವರ್ಯರು "ಓಹ್! ಮಲಯಾಳ ಕವಿತೆಯಲ್ಲಿ ಪರೀಕ್ಷಿಸಲು ಏನಿರುವುದು? ಅಸಂಬದ್ಧವಲ್ಲವೆ?" ಎಂದು ತಾತ್ಸಾರದಿಂದ ನುಡಿದರು. ಈ ಆಘಾತವನ್ನು ಸಹಿಸಲಾರದೆ ಪೂಂತಾನಂ ಅವರು ದುಃಖದಿಂದ ರೋದಿಸಿದಾಗ ಗರ್ಭಮಂದಿರದಿಂದ "ನನಗೆ ಮೇಲ್ಪತ್ತೂರಿನ ವಿಭಕ್ತಿಗಿಂತ (ಪಾಂಡಿತ್ಯ) ಪೂಂತಾನಂನ ಶುದ್ಧಭಕ್ತಿಯೇ ಪ್ರಿಯವಾದುದು" ಎಂದು ದೇವವಾಣಿ ಮೊಳಗಿತು. ಮೇಲ್ಪತ್ತೂರರಿಗೆ ತಮ್ಮ ಅಪರಾಧದ ಅರಿವಾಗಿ ಪಶ್ಚಾತ್ತಾಪದಿಂದ ಕ್ಷಮೆ ಯಾಚಿಸಿ ನಂಬೂದಿರಿಯ ಕೃತಿಯನ್ನು ಓದಿ, ಬಹಳ ಉತ್ತಮವಾಗಿದೆ ಎಂದು ಪ್ರಶಂಸಿಸಿದರು. ಈ ಕೃತಿಯಲ್ಲಿ ಇರುವ ವೈಕುಂಠದ ವರ್ಣನೆಯನ್ನು ಬರೆಯುವ ಸಂದರ್ಭದಲ್ಲಿ ಸಂಶಯಗಳು ತಲೆದೋರಿದಾಗಲೆಲ್ಲ ಪೂಂತಾನಂ ಅವರಿಗೆ ಸ್ವಪ್ನದಲ್ಲಿ ವೈಕುಂಠದ ದರ್ಶನ ಲಭಿಸಿತು ಎಂದು ಐತಿಹ್ಯವಿದೆ.

ಗುರುವಾಯೂರು ಕ್ಷೇತ್ರದಲ್ಲಿ ಒಮ್ಮೆ ಪೂಂತಾನಂ ಶ್ರೀವಿಷ್ಣು ಸಹಸ್ರನಾಮವನ್ನು ಪಾರಾಯಣ ಮಾಡುತ್ತಿದ್ದಾಗ **ಪದ್ಮನಾಭೋಽಮರಪ್ರಭುಃ** ಎಂದು ಸ್ತುತಿಸಿದ್ದನ್ನು ಕೇಳಿದ ಪಂಡಿತನೋರ್ವನು ಹಾಸ್ಯಮಾಡುತ್ತ "ಅಯ್ಯೋ ತಿಳಿಗೇಡಿ! ಮರಪ್ರಭುವೋ? ಅಮರಪ್ರಭುಃ ಎಂದಲ್ಲವೇ ಇರುವುದು?" ಎಂದು ವ್ಯಂಗ್ಯವಾಗಿ ತಪ್ಪನ್ನು ತಿದ್ದಿದನು. ಇದರಿಂದ ನೊಂದು, ಸಂಸ್ಕೃತಭಾಷೆಯ ಅರಿವಿಲ್ಲದುದಕ್ಕೆ ಲಜ್ಜಿತರಾಗಿ ಪೂಂತಾನಂ ತಲೆ ತಗ್ಗಿಸಿದರು. ಅವರನ್ನು ಆ ಅವಮಾನದಿಂದ ರಕ್ಷಿಸಲೋ ಎನ್ನುವಂತೆ ದೇವರ ಸನ್ನಿಧಿಯಿಂದ "ಹೌದು, ನಾನು ಮರಪ್ರಭುವೂ ಆಗಿರುವೆನು" ಎಂಬ ದೇವವಾಣಿಯು ಕೇಳಿಬಂದಿತು. ಇದರಿಂದ ಆ ಪಂಡಿತ ದಂಗುಬಡಿದಂತಾದನು.

ದೇವಸ್ಥಾನದಲ್ಲಿ ನಡೆಯುತ್ತಿದ್ದ ಭಾಗವತ ಸಪ್ತಾಹಗಳ ಶ್ರವಣದಿಂದ ತತ್ತ್ವದ ಸಾರವನ್ನು ಚೆನ್ನಾಗಿ ಗ್ರಹಿಸಿದ ಪೂಂತಾನಂ ಅನಂತರ ತಾವೇ ಅದನ್ನು ವಿವರಿಸಲಾರಂಭಿಸಿದರು. ಭಾಗವತದ ಅರ್ಥವಿವರಣೆಯ ಇವರ ಶೈಲಿಯನ್ನು ಶ್ರೋತೃಗಳು ಬಹಳವಾಗಿ ಇಷ್ಟಪಡುತ್ತಿದ್ದರು. ಒಮ್ಮೆ ರುಕ್ಮಿಣೀ ಸ್ವಯಂವರದ ವರ್ಣನೆಯನ್ನು ವಿವರಿಸುತ್ತಿರುವಾಗ, ರುಕ್ಮಿಣಿಯು ದೂತನಾದ ಬ್ರಾಹ್ಮಣನ ಕೈಯಲ್ಲಿ ಶ್ರೀಕೃಷ್ಣನಿಗೆ ಪತ್ರವನ್ನು ಕಳುಹಿಸಿದಳು ಎಂದು ಹೇಳಿದರು. ಇದನ್ನು ಕೇಳಿದ ಶ್ರೋತೃಗಳಲ್ಲೊಬ್ಬರು "ಪತ್ರ ಕಳುಹಿಸಿದ ಸಂಗತಿ ಯಾವ ಶ್ಲೋಕದಲ್ಲಿರುವುದು?" ಎಂದು ಪ್ರಶ್ನಿಸಿದಾಗ, "ಪತ್ರ ಕಳುಹಿಸಿರಲಿಲ್ಲ ಎಂದು ಯಾವ ಶ್ಲೋಕದಲ್ಲಾದರೂ ಇದೆಯೇ?" ಎಂಬ ಮರುಪ್ರಶ್ನೆಯು ಅಶರೀರವಾಣಿ ಕೇಳಿಬಂದಿತಂತೆ. ಪೂಂತಾನಂ ನಂಬೂದಿರಿ ಸಂಸ್ಕೃತ ಪಂಡಿತರಲ್ಲ ಎಂದು ಇತರ ಪಂಡಿತರು ಅಹಂಕಾರದಿಂದ ಅವಹೇಳನ, ಅವಮಾನಗಳನ್ನು ಮಾಡಿದ ಸಂದರ್ಭಗಳಲ್ಲೆಲ್ಲಾ ಭಕ್ತವತ್ಸಲನಾದ ಗುರುವಾಯೂರಪ್ಪನ್ ಅವರನ್ನು ಪಾರು ಮಾಡಿ ರಕ್ಷಿಸಿದನು.

ಕಾಲಾನಂತರದಲ್ಲಿ ಅಲ್ಲಿ ಎಲ್ಲರಿಗೂ ಪೂಂತಾನಂ ಅವರ ಬಗ್ಗೆ ಭಕ್ತಿ ಗೌರವಗಳುಂಟಾಗಿ ಕ್ಷೇತ್ರದಲ್ಲಿ ಅವರಿಗೆ ಉನ್ನತ ಸ್ಥಾನವನ್ನು ನೀಡಿದರು. ಹೀಗಿರುವಾಗ ದೂರದೇಶದಿಂದ ಮಹಾಪಂಡಿತರೊಬ್ಬರು ಅಲ್ಲಿಗೆ ಬಂದಾಗ, ಕ್ಷೇತ್ರದ ಅಧಿಕಾರಿಗಳು ಆ ಉನ್ನತ ಸ್ಥಾನವನ್ನು ಅವರಿಗೆ ನೀಡಬೇಕೆಂದು ನಿರ್ಧರಿಸಿ, ಪೂಂತಾನಂ ಅವರಿಗೆ ತಮ್ಮ ಸ್ಥಾನವನ್ನು ಬಿಟ್ಟುಕೊಡಲು ಆಜ್ಞಾಪಿಸಿದರು. ಹಾಗೂ, ಅವರ ಒಪ್ಪಿಗೆ ಸಿಗದಿದ್ದಾಗ, ಅವರನ್ನು ಬಲವಂತವಾಗಿ ಹೊರಕ್ಕೆ ಹಾಕಿದರು.

ಈ ದೌರ್ಜನ್ಯದಿಂದ ಬಹಳವಾಗಿ ನೊಂದ ತನ್ನ ಪ್ರಿಯ ಭಕ್ತನನ್ನು ಗುರುವಾಯೂರಪ್ಪನ್ ಸಮಾಧಾನಪಡಿಸಿ, "ನೀನು ಈ ದುರುಳರ ಸಂಗಡ ಇನ್ನು ಇರಬೇಡ. ನಿನ್ನ ಸ್ವಂತ ಮನೆಯಲ್ಲಿಯೇ ಇರು. ನೀನು ನನ್ನನ್ನು ಯಾವಾಗ ಕಾಣಬೇಕು ಎಂದು ಆಶಿಸುವೆಯೋ ಆ ಕ್ಷಣದಲ್ಲಿ ನಾನೇ ಅಲ್ಲಿಗೆ ಬಂದು ನಿನಗೆ ದರ್ಶನ ನೀಡುವೆ" ಎಂದು ಭರವಸೆಯಿತ್ತನು. ಭಗವದ್ವಾಣಿಯನ್ನು ಕೇಳಿ ಪೂಂತಾನಂ ಸಮಾಧಾನ, ಸಂತೃಪ್ತಿ, ಆನಂದಗಳಿಂದ ತುಂಬಿದವರಾಗಿ ತಮ್ಮ ಸ್ವಗೃಹಕ್ಕೆ ಹಿಂತಿರುಗಿದರು. ಅವರಿಗೆ ಶ್ರೀಕೃಷ್ಣನ ದರ್ಶನ ದೊರೆತ ಸ್ಥಳದಲ್ಲಿ ಅನಂತರ ಒಂದು ದೇವಾಲಯವನ್ನು ನಿರ್ಮಿಸಿದರು. ಅದು ಒಂದು ತೀರ್ಥಸ್ಥಳವಾಯಿತು.

ಅವರ ಅಂತ್ಯಕಾಲ ಸಮೀಪಿಸಿದಾಗ ಪೂಂತಾನಂ ಹತ್ತಿರವಿದ್ದವರಿಗೆ "ನಾಳೆಯ ದಿನ ಶ್ರೀವಿಷ್ಣುಪರಮಾತ್ಮನು ನನ್ನನ್ನು ವೈಕುಂಠಕ್ಕೆ ಕರೆದುಕೊಂಡು ಹೋಗಲು ಬರುವನು" ಎಂದು ಹೇಳಿದರು. ಮರುದಿನ ದೇವರ ಪೂಜೆ, ನೈವೇದ್ಯಗಳ ಅನಂತರ ಅನೇಕರಿಗೆ ಹಬ್ಬದೂಟ ಉಣಬಡಿಸಿದರು. ಬಳಿಕ "ಇದೋ ಭಗವಂತನು ಬಂದಿರುವನು. ನಾನು ಹೊರಟೆ, ನೀನು ನನ್ನ ಸಂಗಡ ಬರುವೆಯಾ?" ಎಂದು ತಮ್ಮ ಧರ್ಮಪತ್ನಿಯನ್ನು ಕೇಳಿದರು. ಆದರೆ, ಅದರಲ್ಲಿ ವಿಶ್ವಾಸ ಬಾರದ ಪತ್ನಿಯ ಬದಲಿಗೆ ಭಗವದ್ಭಕ್ತೆಯಾದ ಅವರ ಮನೆಯ ದಾಸಿಯು, "ಸ್ವಾಮಿ, ಇದೋ ನಾನು ಬಂದೆ" ಎಂದು ಹೊರಟಳು. ಪರಮಭಕ್ತ ಪೂಂತಾನಂ ನಂಬೂದಿರಿಯವರ ಪುಣ್ಯಸಂಗದ ಫಲದಿಂದ ದಾಸಿಗೂ ಮೋಕ್ಷ ಲಭಿಸಿತು ಎಂದು ಪ್ರತೀತಿ.

ಪೂಂತಾನಂರವರ ಪ್ರಧಾನ ಕೃತಿಗಳು ಜ್ಞಾನಪಾನ, ಸಂತಾನಗೋಪಾಲಂ, ಪಾರ್ಥಸಾರಥೀಸ್ತವ. ಜೊತೆಗೆ ನಾರಾಯಣ ಕೀರ್ತನೆಗಳು ಹಾಗೂ ಗೌರೀ ಕೀರ್ತನೆಗಳು. ಇವಲ್ಲದೆ ಮತ್ತೂ ಹಲವಾರು ಕೃತಿಗಳನ್ನು ಇವರು ರಚಿಸಿದ್ದಾರೆ. ಅತಿ ಸಾಮಾನ್ಯ ಹಿನ್ನೆಲೆಯಲ್ಲಿ ಹುಟ್ಟಿದ್ದರೂ ತಮ್ಮ ಅಸಾಧಾರಣ ಭಕ್ತಿಯಿಂದ ಲೋಕಮಾನ್ಯರಾಗಿ, ಭಕ್ತಿಯ ಅಭಿವ್ಯಕ್ತಿಯನ್ನು ಮನಮುಟ್ಟುವಂತೆ ಸಾಹಿತ್ಯದ ಮೂಲಕ ಲೋಕಕ್ಕೆ ನೀಡಿದ ಇವರು ಭಾರತೀಯ ಸಂಸ್ಕೃತಿಯನ್ನು ಉಜ್ವಲಗೊಳಿಸಿದ್ದಾರೆ ಎಂದರೆ ಉತ್ಪ್ರೇಕ್ಷೆಯಾಗಲಾರದು. *

## ಪ್ರಹಸನ ಪ್ರಸಂಗ

ಇಬ್ಬರು ಪೋಲಿಸರು ಒಬ್ಬ ಕಳ್ಳನನ್ನು ಅಟ್ಟಿಸಿಕೊಂಡು ಹೋಗುತ್ತಿದ್ದರು. ಬಹಳ ದೂರ ಓಡಿದ ಮೇಲೆ ಒಬ್ಬ ಪೋಲಿಸ್ ಕೂಗಿಕೊಂಡ, "ನಿಲ್ಲು, ಇಲ್ಲದಿದ್ದರೆ ನಾನು ಈ ಕೂಡಲೇ ನನ್ನನ್ನೇ ಶೂಟ್ ಮಾಡಿಕೊಳ್ಳುತ್ತೇನೆ." ಇದನ್ನು ಕೇಳಿಸಿಕೊಂಡ ಕಳ್ಳ ನಗುವನ್ನು ತಡೆಯಲಾರದೆ ನಿಂತುಬಿಟ್ಟ. ತಮಾಷೆಯೇ ಬಂಧನಕ್ಕೆ ಕಾರಣವಾಯಿತು.

* * *

ತನ್ನ ಸ್ನೇಹಿತನ ಜನ್ಮದಿನದಂದು ಶುಭಕೋರಲು ಸತೀಶ ದೂರವಾಣಿಯನ್ನು ಮಾಡಿ, "ಹ್ಯಾಪಿ ಬರ್ತ್‌ಡೇ ಟು ಯು" ಎಂದು ಹಾಡಲು ಪ್ರಾರಂಭಿಸಿದ. ಆ ಕಡೆಯಿಂದ ಪ್ರತ್ಯುತ್ತರ ಬಂತು, "ತಾವು ತಪ್ಪು ನಂಬರ್ ಡಯಲ್ ಮಾಡಿದ್ದೀರಿ. ಆದರೂ ಪರವಾಗಿಲ್ಲ, ಯೋಚಿಸಬೇಡಿ, ನಿಮಗೆ ಹಾಡಲು ಅಭ್ಯಾಸ ಬೇಕಾಗಿರುವುದರಿಂದ ಒಳಿತೇ ಆಯಿತು."

* * *

ತನ್ನ ಗೆಳತಿಯೊಡನೆ ಷಾಪಿಂಗ್‌ಗೆ ಹೋಗಿದ್ದ ಮಗಳು ತಾಯಿಗೆ ಅಲ್ಲಿಂದಲೇ ಫೋನ್ ಮಾಡಿದಳು:

**ಮಗಳು:** ಅಮ್ಮ! ನಾನು ನಿನ್ನ ಕಛೇರಿಯ ಬಳಿಯೇ ಇದ್ದೇನೆ. ಊಟಕ್ಕೆ ನನ್ನೊಡನೆ ಬರುವೆಯಾ?

**ತಾಯಿ:** (ಸಂತೋಷದಿಂದ) ಎಷ್ಟು ಪ್ರೀತಿಯಿಂದ ಕರೆಯುತ್ತಿರುವೆ! ಖಂಡಿತಾ ಬರುವೆ.

**ಮಗಳು (ಗೆಳತಿಗೆ) :** ಅಬ್ಬ! ಈಗ ಊಟಕ್ಕಾಗಿ ಹಣ ಉಳಿಸಬೇಕಿಲ್ಲ. ಖರ್ಚು ಮಾಡಬಹುದು!

* * *

ಒಂದು ದಿನದ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯವನ್ನು ವೀಕ್ಷಿಸುತ್ತಿದ್ದ ತಂದೆ ಮತ್ತು ಅವನ ಐದು ವರ್ಷದ ಹೆಣ್ಣುಮಗಳ ನಡುವಿನ ಸಂಭಾಷಣೆ:

**ತಂದೆ:** ಮಗು, ಭಾರತ ಈಗ ಆಟ ಪ್ರಾರಂಭ ಮಾಡಿದೆ. ಯಾರು ಗೆಲ್ಲುವರು ಎಂದು ಹೇಳಬಲ್ಲೆಯಾ?

**ಮಗು:** ನೀಲಿ ಬಟ್ಟೆಯನ್ನು ಹಾಕಿರುವವರು ಯಾರು?

**ತಂದೆ:** ಭಾರತದವರು.

**ಮಗು:** ಹಳದಿ ಬಟ್ಟೆಯನ್ನು ಹಾಕಿಕೊಂಡಿರುವವರು ಯಾರು?

**ತಂದೆ:** ಆಸ್ಟ್ರೇಲಿಯಾದವರು.

**ಮಗು:** ಹಾಗಾದರೆ ಆಸ್ಟ್ರೇಲಿಯಾದವರೇ ಗೆಲ್ಲುತ್ತಾರೆ. ಭಾರತೀಯರು ಇಬ್ಬರೇ ಇದ್ದಾರೆ; ಅವರು ಹನ್ನೊಂದು ಮಂದಿ!

*